# ಧ್ಯಾನಮಾಲಾ

**ತಾತ್ಪರ್ಯ : ವಿದ್ವಾನ್ ಡಾ. ಷಣ್ಮುಖ ಹೆಬ್ಬಾರ್**

**ಅನೇಕ–ಜನ್ಮ–ಸಂಚಿತ–ಪ್ರಭೂತ–ಪುಣ್ಯ–ನಿರ್ಮಿತಮ್ ।**
**ಶರೀರಮೀದೃಶಂ ಭವೇತ್ ಕುತೋಽನ್ಯಥಾ ರತಿರ್ಹರೌ ॥ ೧ ॥**

ಅನೇಕ ಬಾರಿ ಹುಟ್ಟಿ ಸಂಪಾದನೆ ಮಾಡಿದ ತುಂಬಾ ತುಂಬಾ ಪುಣ್ಯದಿಂದ ಈ ಶರೀರ ಬಂದಿದೆ. ಈ ರೀತಿ ಪುಣ್ಯದಿಂದ ಬಂದ ಶರೀರವಿಲ್ಲವಾದರೆ ಹರಿಯಲ್ಲಿ ಭಕ್ತಿ ಮಾಡುವುದಾದರೂ ಹೇಗೆ ಸಾಧ್ಯ..?

ಈ ಮನುಷ್ಯದೇಹ ಆಕಸ್ಮಿಕವಾಗಿ ಸಿಕ್ಕಿದ್ದಲ್ಲ. ಸ್ವಲ್ಪ ಪುಣ್ಯವೂ ಕಾರಣವಲ್ಲ. ಯಾವುದೋ ಒಂದು ಮಹಾ ಪುಣ್ಯದಿಂದಷ್ಟೇ ಈ ಮನುಷ್ಯದೇಹ ಬರಲು ಸಾಧ್ಯ. ಈ ಶರೀರ ಬಾರದಿದ್ದರೆ, ಕೇವಲ ಜೀವಸ್ವರೂಪದಿಂದಷ್ಟೆ, ಅಥವಾ ಬೇರೆ ಯಾವುದೇ ರೀತಿಯಿಂದಲೂ ಈ ರೀತಿಯಾಗಿ ಹರಿಯನ್ನು ಪ್ರೀತಿಸಲು ಅಸಾಧ್ಯವಾಗಿದೆ.

**ಅದಃ ಪ್ರಪದ್ಯಸಾಧವಃ ಪ್ರಸಾಧಯಂತಿ ಮಾಧವಮ್ ।**
**ಸದಾಗಮೈಃ ಸು–ಯುಕ್ತಿಭಿಃ ಸುನಿಷ್ಠಯಾ ಚ ಭಕ್ತಿಭಿಃ ॥ ೨ ॥**

ಇಂಥಾ ಶರೀರವನ್ನು ಪಡೆದು ವಿಷ್ಣುಭಕ್ತರಾದ ಸಜ್ಜನರು ಒಳ್ಳೆಯ ಯುಕ್ತಿಗಳಿಂದ (ವೇದವು) ಅಪೌರುಷೇಯವಾದ್ದರಿಂದ ದೋಷರಹಿತವಾದ ವೇದಗಳಿಂದ ದೃಢವಾದ ವಿಧವಿಧದ ಭಕ್ತಿಗಳಿಂದ ಸಂತೋಷ ಪಡಿಸುತ್ತಾರೆ.

ಈ ಮಾನುಷ ಶರೀರವನ್ನು ಪಡೆದದ್ದು ಸಾರ್ಥಕವಾಗುವುದು ಹೇಗೆಂದರೆ ವೇದ–ಮಹಾಭಾರತ ಪುರಾಣ ಮೊದಲಾದ ಶಾಸ್ತ್ರ ಗ್ರಂಥಗಳಿಂದ ಮತ್ತು ಅನೇಕ ಯುಕ್ತಿಗಳಿಂದ ನಾರಾಯಣನ ಸ್ವರೂಪವನ್ನು ನಿಷ್ಕರ್ಷೆ ಮಾಡಿಕೊಂಡು ಒಲಿಸಿ ಕೊಳ್ಳುವುದರ ಮೂಲಕ.

**ವಯಂ ಚ ದೈವ –ಯೋಗತಃ ಪ್ರತೀಕಮೀದೃಶಂ ಗತಾಃ ।**
**ಯತಾಮಹೇ ಮನೋ–ವಚಃ–ಪ್ರವೃತ್ತಿಭಿಃ ಸುವೃತ್ತಿಭಿಃ ॥ ೩ ॥**

ನಾವಾದರೂ ಅದೃಷ್ಟದ ಬಲದಿಂದ ದೈವಯೋಗದಿಂದ ಇಂತಹಾ ಸಾಧನ ಶರೀರವನ್ನು ಪಡೆದಿದ್ದೇವೆ. ಆದ್ದರಿಂದಲೇ ಮಾತಿನಿಂದ ಮತ್ತು ಮನಸ್ಸಿನಿಂದ

ಆ ನಾರಾಯಣನನ್ನೇ ಖುಷಿ ಪಡಿಸಲು ಪ್ರಯತ್ನಿಸುತ್ತೇವೆ. ದೇಹವನ್ನು ಹರಿಯ ಸೇವೆಯಲ್ಲಿ, ಮಾತನ್ನು ದೇವರ ಚರಿತ್ರೆ ಹೇಳಲು, ಸ್ತೋತ್ರ ಮಾಡಲು, ಮತ್ತು ಮನಸ್ಸನ್ನು ನಿರಂತರ ಹರಿಯನ್ನು ಸ್ಮರಿಸಲು ಬಳಸಿ ಹರಿಯ ಒಲುಮೆಗೆ ಯತ್ನಿಸುತ್ತೇವೆ.

**ಅನಾದಿ–ಕರ್ಮ–ವಾಸನಾ–ನಿರಂತರಾನು–ಬಂಧನಮ್ ।**
**ನೃಸಿಂಹ–ಪಾವಕೇ ಮನೋ ನಿಮಜ್ಜ್ಯ ಭಸ್ಮ–ಸಾತ್ ಕುರು ॥ ೪ ॥**

(ಅನಾದಿ ಕಾಲದಿಂದ ನಡೆಸುತ್ತಾ ಬಂದಿರುವ ನಾನಾ ಕರ್ಮಗಳ ಸಂಸ್ಕಾರಗಳ ಒತ್ತಡದಿಂದ ಬಂಧನವಿದೆ. ಓ ಮನವೇ ಈ ಎಲ್ಲಾ ಸಂಸ್ಕಾರಗಳನ್ನು ನರಸಿಂಹಾಗ್ನಿಯಲ್ಲಿ ಹೋಮಿಸಿ ಭಸ್ಮ ಮಾಡಿಬಿಡು)

ಓ ಮನವೇ... ಅನಾದಿಕಾಲದಿಂದ ನಿನಗೆ ಅಂಟಿರುವ ಎಡೆಬಿಡದ ಕರ್ಮಗಳ ಗಂಟನ್ನು ನರಸಿಂಹನೆಂಬ ಅಗ್ನಿಯಲ್ಲಿ ಸುಟ್ಟು ಬಿಡು. ನಾವು ಈ ಜನ್ಮಕ್ಕಿಂತಲೂ ಹಿಂದೆಯೂ ಬೇರೆಯೇ ಜನ್ಮವನ್ನು ಪಡೆದವರಾಗಿದ್ದೆವು. ಇದಕ್ಕೆ ಆದಿಯಿಲ್ಲ. ಆದ್ದರಿಂದ ಅನಾದಿ ಕಾಲದಿಂದ ಮನದಲ್ಲಿ ಯಾವ್ಯಾವ ಆಲೋಚನೆಗಳು ಮೂಡಿವೆಯೋ ಅದೆಲ್ಲದರ ಸಂಸ್ಕಾರಗಳು ನಮ್ಮ ಮನದಲ್ಲಿ ಇದ್ದೇ ಇದೆ. ಈ ಸಂಸ್ಕಾರಗಳೆಲ್ಲ ಆಗಾಗ ಮೊಳಕೆಯೊಡೆಯುತ್ತಿರುತ್ತವೆ. ಆವಾಗ ಆ ಆಲೋಚನೆಗೆ ಅನುಗುಣವಾಗಿ ವರ್ತನೆ ಉಂಟಾಗುವುದು. ಅವೆಲ್ಲ ಮತ್ತೆ ದಾರಿತಪ್ಪಿಸುವವುಗಳೇ ಆಗುವವು. ಅದನ್ನೆಲ್ಲಾ ದೂರ ಮಾಡಬೇಕಾದರೆ ಏನು ಉಪಾಯ ಎಂದರೆ ನಿರಂತರ ನರಸಿಂಹನೆಂಬ ಅಗ್ನಿಯನ್ನು ನೆನೆಯುವುದು. ಆವಾಗ ಆ ಸಂಸ್ಕಾರಗಳು ಕ್ರಮೇಣ ನಶಿಸುವವು.

**ಅಶೇಷ–ಕಲ್ಮಷ–ಕ್ಷಯಾತ್ ತತಃ ಪ್ರಬೋಧಯೋ ಭವೇತ್ ।**
**ಅಥಾಪಿ ಭಕ್ತ–ವತ್ಸಲೋ ಹರಿಃ ಪ್ರಸಾದಮೃಚ್ಛತಿ ॥ ೫ ॥**

ಹೀಗೆ ನರಸಿಂಹನನ್ನು ನೆನೆಯುತ್ತಿದ್ದರೆ ಮನಸ್ಸಿನಲ್ಲಿದ್ದ ಅನಪೇಕ್ಷಿತ ಸಂಸ್ಕಾರಗಳೆಲ್ಲವೂ ನಾಶವಾಗಿ ಮನಸ್ಸು ಪರಿಶುದ್ಧವಾಗುವುದು. ಹೀಗೆ ಶುದ್ಧಿಗೊಂಡ ಅಂತಃಕರಣದಲ್ಲಿ ಹರಿಯ ನೇರರೂಪ ಕಾಣಿಸಿಕೊಂಡು ಜ್ಞಾನೋದಯವಾಗುವುದು. ಆಗಲೇ ಹರಿಯೂ ಪ್ರಸನ್ನನಾಗಿ ತನ್ನ ಭಕ್ತನಿಗೆ ಮಾಡಬೇಕಾದ ಪರಮಾನುಗ್ರಹವನ್ನು ಮಾಡುತ್ತಾನೆ. ಮೋಕ್ಷವೇ ಹರಿಯ ಪರಮಾನುಗ್ರಹ. ಜೀವನಿಗೆ, ತನ್ನದಲ್ಲದ ಈ ಸಾಂಸಾರಿಕ ರೂಪವನ್ನು ತೊಡೆದು ಹಾಕಿ, ನಿಜರೂಪವಾದ ಸುಖಸ್ವರೂಪವನ್ನು ಆವಿರ್ಭಾವಗೊಳಿಸುತ್ತಾನೆ.

**ಸದಾಗಮೈಃ ಸಮನ್ವಯಾತ್ ಸದೋದಿತಾ ಗುಣಾ ಹರೇಃ ।**
**ನ ಯುಕ್ತಯೋ ನಚಾಽಗಮಾ ವಿರೋದ್ಧುಮೀಶತೇ ಪರೇ ॥ ೬ ॥**

ವೇದವೇ ಮೊದಲಾದ ಶಾಸ್ತ್ರಗ್ರಂಥಗಳು ಹರಿಯ ಗುಣಗಳ ಹೆಗ್ಗಳಿಕೆಯನ್ನೇ ಹೇಳಿವೆ. ಇದು ವೇದಗಳ ಮೇಲು ನೋಟವಲ್ಲ, ಪೂರ್ವ–ಪರ ವಿಮರ್ಶೆಯಿಂದ ಕಂಡುಕೊಂಡ ವಿಚಾರ. ಕೇವಲ ಒಣತರ್ಕವಾಗಲೀ ಇತರ ಯಾವುದೇ ಗ್ರಂಥಗಳಾಗಲೀ ತಡೆಯಲು ಸಾಧ್ಯವಿಲ್ಲ, ಅಲ್ಲಗಳೆಯುವಂತಿಲ್ಲ.

**ಹರೇಃ ಪ್ರಬೋಧ–ಸಂಭವೋ ವಿರಕ್ತಿ–ಭಕ್ತ್ಯುಪಾಸ್ತಿಭಿಃ ।**
**ನಿಜಾಪರೋಕ್ಷ್ಯ–ಭಾಗಿನಃ ಸೃತೇರಯಂ ಪ್ರಮೋಚಯೇತ್ ॥ ೭ ॥**

ಮನಸ್ಸು ತಿಳಿಯಾದ ಬಳಿಕ ಲೌಕಿಕ ವಿಷಯಗಳಲ್ಲಿ ಅನಾಸಕ್ತಿ, ಹರಿಯಲ್ಲಿ ಭಕ್ತಿ ಮತ್ತು ಶ್ರವಣ, ಚಿಂತನ ಮತ್ತು ಧ್ಯಾನಗಳಿಂದ ಹರಿಯ ಅಪರೋಕ್ಷಜ್ಞಾನ ಉಂಟಾಗುವುದು. ಹೀಗೆ ಅಪರೋಕ್ಷಜ್ಞಾನ ಪಡೆದವರನ್ನು ಹರಿಯು ಸಾಂಸಾರಿಕ ಬಂಧನದಿಂದ ಬಿಡುಗಡೆಗೊಳಿಸುತ್ತಾನೆ.

**ಇತೀಮಮರ್ಥಮಂಜಸಾ ಮನಃ ಸದೈವ ಭಾವಯ ।**
**ತ್ವಮಂಗ ವಾಗನಾಕುಲಂ ವಿಚಾರಯಸ್ವ ಶಾಸ್ತ್ರತಃ ॥ ೮ ॥**

ಓ ಎನ್ನ ಮನವೇ, ಈ ಹೇಳಿದ ಮಾತುಗಳನ್ನು ಯಾವಾಗಲೂ ಯೋಚಿಸು, ವಿಚಾರ ಮಾಡು, ಆದರೆ ಶಾಸ್ತ್ರಬಿಟ್ಟು ವಿಚಾರ ಮಾಡಬೇಡ. ಲೋಕದ ಮಾತಿಗೋ ಇನ್ನಾವುದೋ ಕಾರಣಗಳಿಗೆ ಮತಿಕೆಡದೆ, ಗೊಂದಲಕ್ಕೊಳಗಾಗದೇ ವೇದದ ಮಾತುಗಳನ್ನು ಶಾಸ್ತ್ರದ ಪರಿಧಿಯೊಳಗೆ ವಿಮರ್ಶಿಸು. ಹರಿಯು ಸಾಮಾನ್ಯರ ಪ್ರತ್ಯಕ್ಷಕ್ಕೋ ಲೋಕದಲ್ಲಿ ಕಂಡ ಉದಾಹರಣೆಗಳಿಗೋ ನಿಲುಕುವವನಲ್ಲ. ಶಾಸ್ತ್ರದಿಂದ ಮಾತ್ರ ತಿಳಿಯಲು ಸಾಧ್ಯವಾದ್ದರಿಂದ ಶಾಸ್ತ್ರವನ್ನು ಬಿಟ್ಟು ಈ ವಿಚಾರ ಮಾಡಿದರೆ ದಾರಿ ತಪ್ಪಬಹುದು.

**ಶತೋತ್ತರಾ ತು ನಾಡಿಕಾ ಸುಷುಮ್ನ–ರಶ್ಮಿ–ದೀಪಿತಾ ।**
**ಉಪಾಸತೋ ಜನಾರ್ದನಂ ಕಳೇಬರೇಽಭಿ–ಭಾಸತೇ ॥ ೯ ॥**

ಹೃದಯದಿಂದ ಹಾದುಹೋಗುವ ನೂರು ನಾಡಿಗಳ ಮೇಲೆ ಒಂದು ನಾಡಿಯಿದೆ. ಸುಷುಮ್ನಾ ಎಂಬ ಸೂರ್ಯನ ಕಿರಣದಿಂದ ಪ್ರಕಾಶಿಸಿದಾಗ ಹರಿಯನ್ನು ಶ್ರವಣ ಮೊದಲಾದ ರೀತಿಯಿಂದ ಉಪಾಸನೆ ಮಾಡುವವನ ದೇಹದಲ್ಲಿಯೂ ಹೊಳೆಯುತ್ತದೆ.

**ದಿನೇಶ–ರಶ್ಮಿ–ಸಂಚಯ–ಸ್ಫುರತ್ಸು–ನಾಡಿಕಾವೃತಾ।**
**ಯಥಾಮೃತಾಂಶು–ಮಂಡಲೀ ಪ್ರದೀಪ್ತ ತಾರಕಾವೃತಾ ॥ ೧೦ ॥**

ಉಪಾಸಕನ ದೇಹದಲ್ಲಿ ಬೆಳಗುವ ಈ ನಾಡಿ ಯಾವುದೆಂದರೆ, ಇದು ಸೂರ್ಯನ ಕಿರಣಗಳಿಂದ ಹೊಳೆಯುವ ಅನೇಕ ನಾಡಿಗಳು ಈ ನಾಡಿಯನ್ನು ಸುತ್ತುವರಿದಿವೆ. ಹೇಗೆಂದರೆ ಆಕಾಶದಲ್ಲಿ ಹೊಳೆಯುವ ಅನೇಕ ನಕ್ಷತ್ರಗಳಿಂದ ಆವೃತನಾದ ಚಂದ್ರನಂತೆ. ಈ ನಾಡಿಗಳು ಸಾಧನೆಯ ದಾರಿಯಲ್ಲಿ ಸಾಗಿದವನಿಗೆ ಕಾಣಿಸುವವು.

**ಅಶೇಷ–ಲೋಕ–ಪಾವನೀ ವಿ–ನಿಃಸೃತಾ ಚ ಮೂರ್ಧನಿ ।**
**ತಯೋರ್ಧ್ವಮೇವ ಯೋ ವ್ರಜನ್ನುತಾಮೃತತ್ವಮೇತಿ ಹಿ ॥ ೧೧ ॥**

ಇದೊಂದು ಅಪೂರ್ವವಾದ ಅತ್ಯಂತ ಶ್ರೇಷ್ಠವಾದ ನಾಡಿ. ಈ ನಾಡಿ ಸಾಧಕರನ್ನು ಸಾಧನೆಯ ಹಾದಿಯಲ್ಲಿ ಮುಂದೆ ಸಾಗುವಂತೆ ಮಾಡಿ ಪವಿತ್ರಗೊಳಿಸುತ್ತದೆ. ಈ ನಾಡಿ ಹೃದಯದಲ್ಲಷ್ಟೇ ಅಲ್ಲ, ತಲೆಯಮಧ್ಯದ ತನಕವೂ ವ್ಯಾಪಿಸಿದೆ. ಕೊನೆಯ ಕಾಲದಲ್ಲಿ ಯಾರ ಪ್ರಾಣವು ಈ ಸುಷುಮ್ನಾ ನಾಡಿಯಿಂದ ಹೊರಹೊಮ್ಮುವುದೋ ಅಂಥವರು ಮತ್ತೆ ಹಿಂತಿರುಗಿ ಬಾರದ, ಮರಣದ ಮುಖ ನೋಡದ ಮೋಕ್ಷಕ್ಕೆ ಹೋಗುತ್ತಾರೆ.

**ಅತೀವಸೂಕ್ಷ್ಮರೂಪಿಣೀ ತಥಾಽಪಿ ಶಕ್ತಿತೋ ಹರೇಃ ।**
**ಮಹಾವಕಾಶ–ಸಂಯುತಾ ದುರಂತ–ಶಕ್ತಿಮಾನ್ ಹ್ಯಜಃ ॥ ೧೨ ॥**

ಈ ನಾಡಿಯು ತುಂಬಾ ಸೂಕ್ಷ್ಮವಾದದ್ದು. ಅದರೆ ಶ್ರೀಹರಿಯ ಸಾಮರ್ಥ್ಯದಿಂದಾಗಿ ಈ ಸೂಕ್ಷ್ಮವಾದ ನಾಡಿಯೊಳಗೂ ವಿಸ್ತಾರವಾದ ಅವಕಾಶವಿದೆ. ಸೂಕ್ಷ್ಮಾಕಾಶದಲ್ಲಿ ಮಹಾವಕಾಶ ಹೇಗೆ ಇರಲು ಸಾಧ್ಯ ಎಂದರೆ ಇದಕ್ಕೆಲ್ಲಾ ಆ ಭಗವಂತನ ಕೊನೆಯಿರದ ಯೋಚಿಸಲೂ ಸಾಧ್ಯವಿಲ್ಲದ, ಕಲ್ಪನೆಗೂ ಸಿಗದ ಅದ್ಭುತ ಶಕ್ತಿಯೇ ಕಾರಣ. ಆದ್ದರಿಂದಲೇ ಮುಂದೆ ಹೇಳುವ ಸಂಗತಿಗಳು ಅಲ್ಲಿ ಇರಲು ಸಾಧ್ಯವಾಗಿದೆ.

**ವರೋಽಪಿ ರತ್ನ–ಮಂಡಪೋ ವಿಭಾತಿ ತತ್ರ ಪೇಶಲಮ್ ।**
**ಅನಂತ–ಕಾಂತ–ಕಾಂತಿ–ಸನ್ಮಣೀಂದ್ರ–ಮಾಲಿಕಾ–ಸ್ಫುರನ್ ॥ ೧೩ ॥**

ಅಲ್ಲಿ ಅತ್ಯಂತ ಸುಂದರವೂ ಶ್ರೇಷ್ಠವೂ ಆದ ರತ್ನದ ಮಂಟಪವೊಂದು ಮಿನುಗುತ್ತಿದೆ. ಆ ಮಂಟಪವು ಮುಗಿಯದ ಕಾಂತಿಯಿಂದ ಆಕರ್ಷಕವೂ ಒಳ್ಳೆಯ ಮಣಿಗಳ ಮಾಲೆಯಿಂದಲೂ ಶೋಭಿಸುತ್ತಿದೆ.

**ಅಮಂದ–ಸೌರಭ–ಸ್ಮಿತ–ಪ್ರಸೂನ–ದಾಮ–ಪಾಳಿಭಿಃ ।**
**ಅಗತ್ವರೋರು–ಕಾಂತಿಭಿಃ ಕ್ಷರತ್–ಸುಧಾಭಿರುಲ್ಲಸನ್ ॥ ೧೪ ॥**

ತುಂಬಾ ಪರಿಮಳವಾದ ಅರಳಿದ ಎಂದೆಂದಿಗೂ ಮಾಸದ ಕಾಂತಿಯ ಅಮೃತವನ್ನು ಹೊರಸೂಸುತ್ತಿರುವ ಹೂವಿನ ಮಾಲೆಯ ಸಾಲುಗಳಿಂದ ಬೆಳಗುತ್ತಿದೆ ಈ ಮಂಟಪ. ಸುಷುಮ್ನಾ ನಾಡಿಯಲ್ಲಿರುವ ಈ ಮಂಟಪ ಹೇಗಿದೆಯೆಂದರೆ ಗಾಢವಾದ ಸುವಾಸನೆಯನ್ನು ಬೀರುವ ಅರಳಿದ ಹೂಗಳ ಮಾಲೆಯಿಂದ ಅಲಂಕೃತವಾಗಿದೆ. ಈ ಹೂವಿನ ಮಾಲೆಯು ಎಷ್ಟು ಸಮಯವಾದರೂ ಮಾಸದ, ಕಡಿಮೆಯಾಗದ ಕಾಂತಿ ಹೊಂದಿದೆ. ಅಮೃತವನ್ನು ಹೊರಹೊಮ್ಮುತ್ತಾ ಶೋಭಿಸುತ್ತಿದೆ.

**ಇಹಾಪಿ ರತ್ನ–ನಿರ್ಮಿತಂ ಸರೋ–ರುಹಂ ಮನೋರಮಮ್ ।**
**ಸುತೀವ್ರಮಚ್ಛ–ಸಚ್ಛದಂ ವಿಕಸ್ವರಂ ವಿರಾಜತೇ ॥ ೧೫ ॥**

ಮತ್ತೆ ಅಲ್ಲಿ ರತ್ನದಿಂದ ನಿರ್ಮಿಸಿದ ತಾವರೆಯಿದೆ, ಮನಸ್ಸಿಗೆ ತುಂಬಾ ಮುದಕೊಡುವುದು. ತೀವ್ರವಾದ ಸುವಾಸನೆ, ಬೆಳ್ಳಗಿನ ಅರಳಿದ ಸುಂದರ ದಳಗಳಿಂದ ಆದು ವಿರಾಜಿಸುತ್ತಿದೆ.

**ವಿ–ಪಾಪ್ಮ–ತಾಂ ಚ ದಭ್ರ–ತಾಂ ಪರಸ್ಯ ವೇಶ್ಮ–ಭೂತ–ತಾಮ್ ।**
**ಪುರಸ್ಯ ಮಧ್ಯಸಂಸ್ಥ–ತಾಂ ಮನೀಷಿಣಃ ಶ್ರುತೌ ಸ್ಫುಟಮ್ ॥ ೧೬ ॥**

**ಉದಾ–ಹರಂತಿ ಯಾನ್ ಗುಣಾನ್ ತದೇತದುತ್ತಮೋತ್ತಮಮ್ ।**
**ಹೃದಂಬುಜಂ ದಿವಾ–ಕರ–ಪ್ರಕಾರ–ದೀಧಿತಿ–ಜ್ವಲತ್ ॥ ೧೭ ॥**

ಈ ತಾವರೆ ಹೇಗಿದೆ ಎಂದರೆ, ಶ್ರುತಿಯಲ್ಲಿ "ಪಾಪದ ಲವ ಲೇಷವೇ ಇಲ್ಲದ, ಅತ್ಯಂತ ಕಿರಿದಾದ, ಪರಮಾತ್ಮನ ಮನೆಯಾಗಿರುವ, ದೇಹದ ಮಧ್ಯದಲ್ಲಿರುವ" ಎಂದು ಹೃದಯ ಕಮಲದ ಗುಣಗಳನ್ನು ವೇದ–ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೋ ಆ ಎಲ್ಲಾ ಗುಣಗಳನ್ನು ಹೊಂದಿದ ಉತ್ತಮೋತ್ತಮ ಈ ಹೃತ್ಕಮಲವು ಸೂರ್ಯನಂತೆ ಬೆಳಕಿನಿಂದ ಬೆಳಗುತ್ತಿದೆ.

ಹಿಂದೆ ಹೇಳಿದ ರೀತಿಯ ಸುಷುಮ್ನಾದಲ್ಲಿರುವ ಹೃದಯ ಕಮಲದ ರೂಪವನ್ನು "ದಹ್ರಂ ವಿಪಾಪ್ಮಂ.." ಎಂಬ ಶ್ರುತಿಯು ಹೇಳಿದ್ದನ್ನು ಇಲ್ಲಿ ನೆನೆಪಿಸಿದ್ದಾರೆ.

**ಅಮುಷ್ಯ ಕರ್ಣಿಕಾ–ಪುಟೇ ಸು–ದೀಪ್ತ–ರತ್ನ–ವಿಷ್ಟರಮ್ ।**
**ಚಕಾಸತಃ ಪರಃ ಪುಮಾನಧಿಷ್ಠಿತೋಽತಿ ಶೋಭನಮ್ ॥ ೧೮ ॥**

ಇಂತಹಾ ಹೃದಯಕಮಲದ ಮಧ್ಯದಲ್ಲಿ ತಾವರೆಯ ಕರ್ಣಿಕೆ ಎಂಬ ಭಾಗವಿದೆ. ಅಲ್ಲಿ ಪ್ರಕಾಶಿಸುವ ರತ್ನನಿರ್ಮಿತ ಆಸನವಿದೆ. ಇಂಥಾ ಹೊಳೆವ ಕಮಲದಲ್ಲಿ ಸಿಂಹಾಸನವನ್ನೇರಿ ಕುಳಿತಿದ್ದಾನೆ ಪರಮಪುರುಷ ನಾರಾಯಣ.

**ಅಸಂಖ್ಯ–ಬಾಲ–ಭಾಸ್ಕರಾರುಣ–ಪ್ರಭೂತ ತೇಜಸಮ್ ।**
**ತಮೇತಮಕ್ಷರಂ ಮನೋವಿ–ಚಿಂತಯಸ್ವ ಸಂತತಮ್ ॥ ೧೯ ॥**

ಎಲೆ ಮನವೇ! ಎಣಿಸಲಾಗದಷ್ಟು ಉದಯಿಸುತ್ತಿರುವ ಎಳೆಯ ಸೂರ್ಯರು ಒಟ್ಟಾದರೆ ಎಂತಹಾ ಬೆಳಕಾಗಬಹುದೋ ಅಂತಹಾ ತೇಜಸ್ಸಿನ ಮೂರ್ತಿಯಾದ ನಾಶವೇ ಇಲ್ಲದ ಆ ಶ್ರೀಹರಿಯನ್ನು ಎಡೆಬಿಡದೆ ಚಿಂತಿಸು.

**ಜಪಾ–ಪ್ರಸೂನ–ಪಾಟಲ–ಸ್ಫುರತ್ತಲಾಂಘ್ರಿ–ಪಂಕಜಮ್ ।**
**ತಟಿಲ್ಲತಾ–ಲಸನ್ನಖಂ ಸು–ಹಾರಿ–ಜಂಘಮುತ್ತಮಮ್ ॥ ೨೦ ॥**

ದಾಸವಾಳದ ಹೂವಿನಂತೆ ನಸುಗೆಂಪು ಬಣ್ಣದಿಂದ ಮಿಂಚುತ್ತಿರುವ ಪಾದ ತಳದ ಪದಕಮಲಗಳ, ಮಿಂಚುಗಳ ಮಾಲೆಯಂತೆ ಹೊಳೆವ ಉಗುರುಗಳ ಮತ್ತು ಮನಸ್ಸನ್ನು ಅಪಹರಿಸುವ ಚೆಲುವಿನ ಮೊಣಗಾಲಿನ ಶ್ರೀಹರಿಯ ನೆನೆ ಮನವೇ.

ಮನಸ್ಸು ಶ್ರೀಹರಿಯನ್ನು ನೆನೆಯ ಬೇಕಿದೆ. ಇದು ಒಂದು ರೀತಿಯಲ್ಲಿ ಧ್ಯಾನವೇ ಆಗಿದೆ. ಧ್ಯಾನಿಸಬೇಕಾದ ಶ್ರೀಹರಿಯ ಮೂರು ಅಂಗಗಳನ್ನು ಹೇಗಿದೆ ಎಂದು ವರ್ಣಿಸಲಾಗಿದೆ. ತಾವರೆಯಂತಹಾ ಪದದ ಅಡಿಭಾಗ ದಾಸವಾಳದಂತೆ ನಸುಗೆಂಪಾಗಿದೆ, ಪಾದದ ಬೆರಳಿನ ಉಗುರುಗಳು ಮಿಂಚುಗಳ ಮಾಲೆಯಂತಿವೆ, ಶ್ರೇಷ್ಠವಾದ ಮೊಣಕಾಲು ತುಂಬಾ ಮನೋಹರವಾಗಿದೆ.

**ಸಮಗ್ರ–ಚಂದ್ರ–ಮಂಡಲಾನು–ಕಾರಿ–ಜಾನು–ಮಂಡಲಮ್ ।**
**ಮಹೇಂದ್ರ–ಹಸ್ತಿ–ಹಸ್ತ–ಸಪ್ರಭೋರು–ಚಾರು–ವಿಭ್ರಮಮ್ ॥ ೨೧ ॥**

ಶ್ರೀಹರಿಯ ಕಾಲಿನ ಮಂಡಿಯ ಭಾಗವಂತೂ ವೃತ್ತಾಕಾರವಾಗಿದ್ದು, ಪೂರ್ಣವಾದ ಚಂದ್ರಮಂಡಲವನ್ನೇ ಅನುಕರಿಸುವಂತಿದೆ, ಅದರ ಮೇಲಿರುವ ತೊಡೆಯಂತೂ ಐರಾವತದ ಸೊಂಡಿಲಿನಂತೆ ಸೌಂದರ್ಯದ ಹೊಳಪು ಪಡೆದಿದೆ.

ಐರಾವತ ಸೊಂಡಿಲಿನಂತೆ ಅಂದರೆ, ಅದರಂತೆ ಬಿಳಿಯಾಗಿದೆ ಮತ್ತು ವೃತ್ತಾಕಾರವಾಗಿ ತುಂಬಾ ದೀರ್ಘವಾಗಿದೆ ಎಂದರ್ಥ.

**ವರಾಚಿತ–ಸ್ಮಿತಾಶನ–ಪ್ರಸೂನ–ಕಾಂತಿ–ವಾಸಸಮ್ ।**
**ವಿಚಿತ್ರ–ರತ್ನ–ಮೇಖಲಾ–ಕಲಾಪ–ವರ್ಯ–ಭೂಷಿತಮ್ ॥ ೨೨ ॥**

ಒಟ್ಟು ಮಾಡಿದ ಒಳ್ಳೆಯ ಅರಳಿದ ಹೊನ್ನೆ ಮರದ ಹೂವುಗಳ ಕಾಂತಿಯ ಬಟ್ಟೆ ಉಟ್ಟ ಅತ್ಯಾಕರ್ಷಕವಾದ ರತ್ನಗಳ ನಡುಪಟ್ಟಿಯ ಸಮೂಹದಿಂದ ಅಲಂಕರಿಸಲ್ಪಟ್ಟ ಶ್ರೀಹರಿಯನ್ನು ನೀನು ನೆನೆಯ ಬೇಕು ಮನವೇ....।

ಹರಿಯು ಉಟ್ಟ ಬಟ್ಟೆ ಹೇಗಿದೆ ಎಂದರೆ ಹೊನ್ನೆಯ ಮರದ ಹೂವಿನಂತೆ

ತಿಳಿಹಳದಿ ಬಣ್ಣದ್ದಾಗಿದೆ. ಸೊಂಟದ ಭಾಗದಲ್ಲಿ ರತ್ನದಿಂದ ನಿರ್ಮಿತವಾದ ಡಾಬು ಇದೆ.

**ವಲಿ–ಸ್ಫುರತ್–ತನೂದರ–ಪ್ರಭಾತ–ನಾಭಿ–ಮಂಡಲಮ್ ।**
**ಪಯೋಬ್ಧಿ–ಕನ್ಯಕಾ–ಧರಾ–ಕರಾವಗೂಢ ಮಧ್ಯಮಮ್ ॥ ೨೩ ॥**

ತ್ರಿವಳಿಗಳಿಂದ ಹೊಳೆಯುವ ತೆಳ್ಳಗಿನ ಹೊಟ್ಟೆಯ ನಡುವೆ ಹೊಳೆವ ದುಂಡಗಿನ ಹೊಕ್ಕಳ ಕುಳಿಯ, ಕ್ಷೀರಸಾಗರ ಕನ್ನಿಕೆಯಾದ ಶ್ರೀಲಕ್ಷ್ಮಿಯಿಂದ ಅಪ್ಪಿ ಹಿಡಿದ ದೇಹದ ನಡುಭಾಗ ಹೊಂದಿದ ಆ ನಾರಾಯಣನ ನೆನೆ ಮನವೇ..

ಸೊಂಟದ ಮೇಲಿರುವ ಹೊಟ್ಟೆಯಲ್ಲಿ ತ್ರಿವಳಿ(ಪಟ್ಟಿಯಂತೆ ಕಾಣುವ ಸುಂದರವಾದ ಮೂರು ರೇಖೆ)ಗಳು ಇವೆ. ಆ ಹೊಟ್ಟೆಯ ಭಾಗವನ್ನು ಲಕ್ಷ್ಮೀ ದೇವಿ ಅಪ್ಪಿ ಹಿಡಿದಿದ್ದಾಳೆ.

**ಕರಾಳ–ಹಾರ–ಮಾಲಯಾ ಸು–ದಿವ್ಯ–ಸೂನ–ಮಾಲಯಾ ।**
**ನಿರಂತರೋರ್ಜಿತ–ಶ್ರಿಯಾ ಚಕಾಸದಚ್ಛ–ವಕ್ಷಸಮ್ ॥ ೨೪ ॥**

ಪ್ರಖರವಾದ ಕಾಂತಿಯ ಮುತ್ತಿನ ಹಾರದಿಂದ ಮತ್ತು ಅಲೌಕಿಕವಾದ ಹೂವಿನ ಮಾಲೆಯಿಂದ ಎಡೆಬಿಡದೆ ಹೊರಹೊಮ್ಮುವ ಕಾಂತಿಯಿಂದ ಬೆಳಗುತ್ತಿರುವ ನಿರ್ಮಲವಾದ ಎದೆಯ ಶ್ರೀ ಹರಿಯನ್ನು ನೆನೆಯ ಬೇಕು ಮನವೇ....।

ನಾರಾಯಣನ ಎದೆ ಹೇಗಿದೆಯೆಂದರೆ, ಮುತ್ತು ಮತ್ತು ಹೂವಿನ ಹಾರದಿಂದ ಎದೆಯ ಭಾಗ ನಿರಂತರವಾಗಿ ವಿಶೇಷ ಕಾಂತಿಯನ್ನು ಹೊರಸೂಸುತ್ತಿದೆ.

**ಸಮಸ್ತ–ಲೋಕ–ಸುಂದರೀಮನಂತ–ರಾಜ–ರೋಚಿಷಮ್ ।**
**ಅಮಂದ–ಭಾಸಿ ಬಿಭ್ರತಂ ಶ್ರಿಯಂ ವಿಶಾಲ–ವಕ್ಷಸಿ ॥ ೨೫ ॥**

ಇಡಿಯ ಜಗತ್ತಿನಲ್ಲೇ ಲಕ್ಷ್ಮಿಯಷ್ಟು ಲಕ್ಷಣಭರಿತ ಸ್ತ್ರೀ ಮತ್ತೊಬ್ಬಳಿಲ್ಲ. ಆದ್ದರಿಂದ ಜಗದೇಕಸುಂದರಿಯೆನಿಸಿದ, ಅನಂತಚಂದ್ರರ ಕಾಂತಿಯಿರುವ ಲಕ್ಷ್ಮೀದೇವಿಯನ್ನು ಬಹಳವಾಗಿ ಶೋಭಿಸುತ್ತಿರುವ ಎದೆಯಲ್ಲಿ ಹೊತ್ತ ನಾರಾಯಣನನ್ನು ಚಿಂತಿಸಬೇಕು.

**ಶಿರೋಧರೋಲ್ಲಸನ್ಮಹಾ–ಮನಃ–ಸಮೂಹ–ಕೌಸ್ತುಭಮ್ ।**
**ಸಮುನ್ನತಾಂಸ–ಮಂಡಲ–ದ್ವಯಾಭಿ–ರಾಮಮುಜ್ವಲಮ್ ॥ ೨೬ ॥**

ನಾರಾಯಣನು ಕೊರಳಿನಲ್ಲಿ ಕೌಸ್ತುಭಮಣಿಹಾರವನ್ನು ಧರಿಸಿದ್ದಾನೆ. ಕೌಸ್ತುಭ ಮಣಿಯು ಗುಣದಿಂದಲೂ ಪ್ರಕಾಶದಿಂದಲೂ ಬಹಳ ದೊಡ್ಡದೇ ಆಗಿದೆ. ಚತುರ್ಮುಖನೇ ಅದರ ಅಭಿಮಾನಿಯಾಗಿ ಅವನೇ ಕೊರಳಲ್ಲಿ ಕಂಗೊಳಿಸಿದಂತಿದೆ.

ಅಷ್ಟೇ ಅಲ್ಲದೇ ಎತ್ತರವಾದ ಹೆಗಲುಗಳೆರಡೂ ಅತ್ಯಂತ ಶೋಭಮಾನವೂ ಸುಂದರವೂ ಆಗಿವೆ. ತಲೆಯನ್ನು ಹೊತ್ತ ಕೊರಳುಗಳಲ್ಲಿ ಹೊಳೆವದೊಡ್ಡ ಮನಸ್ಸಿನ ಸಮೂಹದಂತಿರುವ ಕೌಸ್ತುಭವನ್ನು ಧರಿಸಿರುವ ಎತ್ತರವಾದ ಹೆಗಲುಗಳೆರಡರಿಂದ ಸುಂದರನೂ ಹೊಳೆಯುತ್ತಿರುವವನೂ ಆದ ನಾರಾಯಣನನ್ನು ನೆನೆಯಬೇಕು.

**ಸು–ದರ್ಶನೀಯಮಂಬುಜಂ ಸುದರ್ಶನಂ ವರೋದರಮ್ ।**
**ಮಹಾ–ದರಂ ದರ–ಚ್ಛಿದಂ ಗದಾಮರಾತಿ–ಭಂಗ–ದಾಮ್ ॥ ೨೭ ॥**

**ಬಿಭರ್ತಿ–ಪಾಣಿ–ಪಲ್ಲವೈರನಂತ–ವಿಭ್ರಮಾಕರೈಃ ।**
**ಚತುರ್ಭಿರುತ್ತಮೋತ್ತಮಂ ತಮಾಂತರ ಸ್ಮರ ಸ್ಫುಟಮ್ ॥ ೨೮ ॥**

ನಾರಾಯಣ ತನ್ನ ನಾಲ್ಕು ಕೈಗಳಿಂದ ನಾಲ್ಕು ಆಯುಧಗಳನ್ನು ಧರಿಸಿದ್ದಾನೆ. ಧರಿಸಿದ ಆ ಕೈಗಳು ಮತ್ತು ಆ ನಾಲ್ಕು ಆಯುಧಗಳು ಹೇಗಿವೆ ಎಂದರೆ– ಎಳೆಯ ಚಿಗುರಿನಂತೆ ಮೃದುವಾದ ತಿಳಿ ಕೆಂಪು ಬಣ್ಣದ ಕೈಗಳು ಅನಂತ ಸೌಂದರ್ಯಗಳ ನೆಲೆಯಾಗಿದೆ. ಕೈಗಳಲ್ಲಿ ಕ್ರಮವಾಗಿ ಮತ್ತೆ ಪುನಃ ನೋಡಲೇ ಬೇಕೆನಿಸುವ ಪದ್ಮ, ಸುಂದರವಾದ ನಡು ಭಾಗವುಳ್ಳ ಸುದರ್ಶನ ಚಕ್ರ, ಭಯವನ್ನು ದೂರ ಓಡಿಸುವ ದೊಡ್ಡಧ್ವನಿಯ ಶಂಖ ಮತ್ತು ಶತ್ರುಗಳ ನಾಶಗೈಯ್ಯುವ ಗದೆಯೂ ಇದೆ. ಇಂತಹಾ ಚತುರ್ಭುಜದ ಹರಿಯನ್ನು ಚೆನ್ನಾಗಿ ನೆನೆ ಮನವೇ...

**ಸು–ಪದ್ಮರಾಗ–ಭಂಗ–ಭಾ–ಸ್ಫುರನ್ನಖಾಳಿ–ಶೋಭಿತಮ್ ।**
**ಸುವರ್ಣ–ರತ್ನ–ಮುದ್ರಿಕಾ–ಪ್ರಭಾತ–ಕೋಮಲಾಂಗುಲಿಮ್ ॥ ೨೯ ॥**

ಶ್ರೀ ಹರಿಯ ಬೆರಳು ಉಗುರುಗಳ ಸೌಂದರ್ಯವನ್ನು ನೆನೆಯ ಬೇಕು. ಅದು ಹೇಗಿದೆಯೆಂದರೆ, ತಿಳಿಕೆಂಪು ಬಣ್ಣದ ಪದ್ಮರಾಗಮಣಿಯ ಕಾಂತಿಯನ್ನೂ ಮೀರಿಸುವಂತೆ ಹೊಳೆವ ಉಗುರು ಹಾಗೂ ಚಿನ್ನ ಮತ್ತು ನಾನಾ ರತ್ನಗಳ ಉಂಗುರ ಗಳ ಪ್ರಭೆಯಿಂದ ಕಂಗೊಳಿಸುವ ಕೋಮಲವಾದ ಬೆರಳುಗಳನ್ನು ನೆನೆಯಬೇಕು.

**ಅನರ್ಘ–ದೀರ್ಘ–ಸದ್–ಘೃಣಿ–ಪ್ರಕಾಶಿತಾಖಿಲಾಶಕೈಃ ।**
**ವರಾಂಗದೈರಲಂಕೃತಂ ಮಹಾಧನೈಃ ಸ–ಕಂಕಣೈಃ ॥ ೩೦ ॥**

ಸುಂದರವಾದ ತೋಳ್ಬಂದಿ ಧರಿಸಿದ ಹರಿಯನ್ನು ನೆನೆಯಬೇಕು ಮನವೇ. ಅತ್ಯುತ್ತಮವಾದ ತುಂಬಾ ಉದ್ದಕ್ಕೆ ಹರಡಿದ ಬೆಳಕಿನಿಂದ ಎಲ್ಲಾ ದಿಕ್ಕುಗಳನ್ನೂ ಪ್ರಕಾಶಪಡಿಸಿದ ಶ್ರೇಷ್ಠ ತೋಳ್ಬಂದಿ ಮತ್ತು ತುಂಬಾ ಬೆಳೆಬಾಳುವ ಕೈ–ಕಡಗಗಳಿಂದ ಕೂಡಿದ ನಾರಾಯಣನ ನೆನೆ ಮನವೇ..!

**ಉದಾರ–ಹಾರ–ಗೌರ–ದತ್–ತತಿಂ ಸು–ಮಂದಹಾಸಿನಮ್ ।**
**ವಿಶುದ್ಧ–ವಿದ್ರುಮಾಧರ–ದ್ವಿಜ–ಚ್ಛದಾತಿ–ಪೇಶಲಮ್ ॥ ೩೧ ॥**

ಶ್ರೀಹರಿಯ ಮುಖದ ದಂತ–ಪಂಕ್ತಿಗಳನ್ನು ಮತ್ತು ತುಟಿಗಳನ್ನು ಧ್ಯಾನಿಸಬೇಕು. ಹೇಗೆಂದರೆ, ದೀರ್ಘವಾದ ಮುತ್ತಿನ ಹಾರದಂತೆ ಬೆಳ್ಳಗಿನ ಹಾಲಿನಂತಹಾ ಹಲ್ಲುಗಳನ್ನು, ಮುಗುಳು ನಗೆಯನ್ನು, ಶುದ್ಧವಾದ ಹವಳದಂತೆ ಕೆಂಪಾದ ಮುಖದ ಮುಚ್ಚಳವಾದ ಕೆಳತುಟಿಯ ಹೊಂದಿದ ಹರಿಯ ಧ್ಯಾನಿಸಬೇಕು.

**ಸು–ಹಾರಿ–ಹೇಮ–ಕುಂಡಲ–ಪ್ರಭಾತ–ಗಂಡ–ಮಂಡಲಮ್ ।**
**ನವೀನ–ವಾರಿಜೋದರ–ಚ್ಛದಾಯತಂಬಕದ್ವಯಮ್ ॥ ೩೨ ॥**

ದೇವರ ಮುಖದಲ್ಲಿರುವ ಕೆನ್ನೆ ಕಣ್ಣುಗಳನ್ನು ಹೀಗೆ ಧ್ಯಾನಿಸ ಬೇಕು. ಮನೋಹರವಾದ ಚಿನ್ನದ ಕಿವಿಯ ಕುಂಡಲದ ಪ್ರಭೆಯಿಂದ ಬೆಳಕಾದ ದುಂಡಗಿನ ಕೆನ್ನೆಗಳ, ಹೊಚ್ಚ ಹೊಸ ತಾವರೆಯ ನಡುವಿನೆಸಳಿನಂತೆ ನೀಲವಾದ ಕಣ್ಣುಗಳೆರಡನ್ನು ಧ್ಯಾನಿಸಬೇಕು.

**ದಯಾರ್ದ್ರಯಾ ದೃಶಾಽನಿಶಂ ಭವಾಬ್ಧಿ–ಸಾಧ್ವಸೋತ್–ಕೃತಾ ।**
**ಸು–ದಿವ್ಯಯಾಽಮೃತ–ಸ್ರುತಾ ನಿಜೇಷು ದೋಗ್ಧಿ ಯೋಽಮೃತಮ್ ॥ ೩೩ ॥**

ಆ ಕಣ್ಣುಗಳು ಎಷ್ಟೊಂದು ಸುಂದರವಾಗಿವೆ ಎಂದರೆ, ಪರಮಾತ್ಮನು ಎಂದೆಂದಿಗೂ ಭಕ್ತರನ್ನು ಉದ್ಧರಿಸಲು ಕಾತರದಿಂದ ಕಾಯುವವನು, ಅವನ ತೆರೆದ ಕಣ್ಣೋಟವೊಂದರಿಂದಲೇ ಭಯವೆಲ್ಲಾ ಓಡಿಹೋಗುವವು. ಅವನ್ನು ನೆನೆದರೆ ಅಮೃತವನ್ನುಂಡಂತೆ. ಆದ್ದರಿಂದ ಉತ್ಕಟವಾದ ದಯೆಯಿಂದ ತೇವಗೊಂಡ ಕಣ್ಣೋಟದ, ನೋಟದ ಮಾತ್ರದಿಂದಲೇ ಸಂಸಾರದ ಭಯವನ್ನೆಲ್ಲಾ ಕತ್ತರಿಸಿ ಹಾಕುವ, ದಿವ್ಯವಾದ ಅಮೃತವನ್ನೇ ಸುರಿಸುತ್ತಿರುವ ತನ್ನ ಭಕ್ತರಿಗೆ ಅಮೃತವನ್ನೇ ಕರೆಯುವ ದಿವ್ಯನೋಟದ ಹರಿಯ ನೋಟವನ್ನು ನಿತ್ಯವೂ ನೆನೆಯಬೇಕು.

**ಅರಾಳ–ನೀಲ–ಕುಂತಳಾವಲೀ–ವಿರಾಜಿ–ಸನ್ಮುಖಮ್ ।**
**ಅನಂತ–ರತ್ನ–ಚಿತ್ರಿತೋನ್ಮಿಷತ್–ಕಿರೀಟ–ಮಂಡಿತಮ್ ॥ ೩೪ ॥**

ಕಣ್ಣಿಗಿಂತಲೂ ಮೇಲಿರುವ ಶ್ರೀಹರಿಯ ಕುರುಳುಗೂದಲ ಮುಖವಿದು, ಗುಂಗುರಾದ ಕಪ್ಪಗಿನ ಕೇಶರಾಶಿಯಿಂದ ರಾರಾಜಿಸುತಿರುವ ಮುಖದ ಮಿತಿಯಿಲ್ಲದ ರತ್ನಗಳಿಂದ ಖಚಿತವಾದ ಹೊಳೆವ ಕಿರೀಟದಿಂದ ಮಂಡಿತನಾದ ನಾರಾಯಣನನ್ನು ಧ್ಯಾನಿಸಬೇಕು.

**ವಿಧೂತ–ದೋಷಮುತ್ತಮಂ ಚಿತಿ–ಪ್ರಮೋದ–ರೂಪಿಣಮ್ ।**
**ಅಧೀಶಿತಾರಮಂಜಸಾ ಭಜಸ್ವ ಚಿತ್ತ ಸಚ್ಚಿತೇ ॥ ೩೫ ॥**

ಹೀಗೆಲ್ಲಾ ನಾರಾಯಣನ ವಿವಿಧ ಅಂಗಾಂಗಗಳ ಸ್ವರೂಪವನ್ನು ಧ್ಯಾನಿಸಲು ಹೇಳಿ ಆಯ್ತು. ಆದರೆ ಈ ಎಲ್ಲಾ ಅಂಗಾಂಗಗಳು ನಮ್ಮ ಅಂಗಾಂಗಗಳಂತೆ ಅಲ್ಲ. ನಾವು ಕಂಡ ಅಂಗಾಂಗಗಳಿಗೆ ದೋಷವೂ ಇದೆ. ಸೀಮಿತವಾದ ಗುಣಗಳೂ ಇವೆ. ಭೌತಿಕವೂ ಆಗಿವೆ. ಈ ರೀತಿಯಾಗಿ ದೇವರನ್ನು ತಿಳಿಯ ಬಾರದು. ಪರಮಾತ್ಮನಿಗೂ ದೇಹ–ಅವಯವಗಳಿರುವುವಾದರೂ ಯಾವುದೇ ದೋಷವಿರಲಾರದು. ಎಲ್ಲವೂ ಸರ್ವೋತ್ಕೃಷ್ಟವೇ ಆಗಿದೆ. ಇದಕ್ಕಿಂತ ಉತ್ತಮವಾದಸೊತ್ತು ಮತ್ತೊಂದಿಲ್ಲ. ನಾರಾಯಣನು ಪರಿಪೂರ್ಣವಾಗಿ ಜ್ಞಾನಾನಂದಮಯನಾಗಿದ್ದಾನೆ. ಇಂಥಾ ಎಲ್ಲರೊಡೆಯನಾದ ಹರಿಯನ್ನೇ ಶುದ್ಧವಾದ ಜ್ಞಾನಕ್ಕಾಗಿ ಭಜಿಸು ಮನವೇ..!

**ಶ್ರಿಯೋದಯದ್–ದಿವಾಕರ–ವ್ರಜ–ಶ್ರಿಯಾ ನಿಷೇವಿತಮ್ ।**
**ಹ್ರಿಯಾ ಕಟಾಕ್ಷ–ವೀಕ್ಷಣ–ಸ್ಫುರನ್ಮುಖಾರವಿಂದಯಾ ॥ ೩೬ ॥**

ಸೇವೆಗಾಗಿ ಲಕ್ಷ್ಮೀದೇವಿಯೇ ಬಂದು ನೆಲೆಸಿದ್ದಾಳೆ. ಹೇಗಿದ್ದಾಳೆ ಆಕೆ? ಉದಯಿಸುತ್ತಿರುವ ಸೂರ್ಯನ ಸಮೂಹದಂತಹ ಕಾಂತಿಯವಳು ಆಕೆ. ತನ್ನ ಗಂಡನನ್ನು ಇನ್ನೂ ನೋಡಲು ನಾಚಿದ ಮುಖವೆಂಬ ತಾವರೆಯ ಮುಖ ಮುದ್ರೆಯನು ಹೊತ್ತವಳು. "ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ" ಎಂದು ವೇದವು ಹರಿಯು 'ಹ್ರೀ' ಮತ್ತು 'ಲಕ್ಷ್ಮೀ' ಎಂದು ಶ್ರೀಯ ಎರಡು ರೂಪದಿಂದ ಕೂಡಿಕೊಂಡಿದ್ದಾನೆ ಎಂದಿದೆ. ಈ ಎರಡು ರೂಪಗಳನ್ನು ಈ ಶ್ಲೋಕದ ಎರಡು ಸಾಲುಗಳು ವರ್ಣಿಸಿವೆ ಎಂದೂ ತಿಳಿಯಬಹುದು.

**ಪ್ರಕಾಶಮಾನ–ಕುಂಡಲ–ದ್ವಯ–ಪ್ರಭಾತ–ಗಂಡಯಾ ।**
**ಪರಾರ್ಘ್ಯ–ರತ್ನ–ಮಾಲಿಕಾ–ಗಣೋಜ್ವಲತ್–ಕಿರೀಟಯಾ ॥ ೩೭ ॥**

ಹರಿಯ ಸೇವೆಗೆ ನಿಂತ ಲಕ್ಷ್ಮೀದೇವಿಯ ವೈಭವವೇ ಎಷ್ಟಿದೆಯೆಂದರೆ, ಲಕ್ಷ್ಮೀದೇವಿಯು ತುಂಬ ಪ್ರಕಾಶಮಾನವಾದ ಕಿವಿಯೋಲೆಗಳೆರಡನ್ನು ಎರಡು ಕಿವಿಗಳಲ್ಲಿ ಧರಿಸಿದ್ದಾಳೆ. ಅದರ ಕಾಂತಿಯಿಂದ ಅವಳ ಕೆನ್ನೆಗಳು ಬೆಳಗಿವೆ. ತುಂಬಾ ಬೆಲೆಬಾಳುವ ರತ್ನಗಳ ಮಾಲೆಯ ರಾಶಿಯಿಂದ ಪ್ರಕಾಶಮಾನವಾದ ಕಿರೀಟವನ್ನೂ ಧರಿಸಿದ್ದಾಳೆ. ಅಂತಹಾ ಲಕ್ಷ್ಮಿಯಿಂದ ಸಹಿತನಾದವನು ಹರಿಯು.

**ಅರಾಳ–ನೀಲ–ಕುಂತಳ–ವ್ರಜೋಡು–ರಾಜ–ವಕ್ತ್ರಯಾ ।**
**ಸ್ಮಿತಾಂಬುಜ–ಚ್ಛದಾಯತ–ಪ್ರಭೂತ–ಕಾಂತಿ–ನೇತ್ರಯಾ ॥ ೩೮ ॥**

ಹರಿಯ ಸೇವಿಸುವ ಲಕ್ಷ್ಮಿಯ ಮುಖದ ಸೌಂದರ್ಯವೇ ಸರಿಸಾಟಿಯಿಲ್ಲದ್ದು. ಗುಂಗುರಾದ ಎಲೆಯ ಮುಂಗುರುಳ ರಾಶಿಯಲ್ಲಿ ನಕ್ಷತ್ರಗಳ ರಾಜನಾದ ಚಂದ್ರನಂಥಾ ಮುಖ. ಅರಳಿದ ತಾವರೆಯ ಎಸಳಿನಂತೆ ಕಾಂತಿಯುಕ್ತವಾದ ಕಣ್ಣುಗಳವಳು ಅವಳು. ಇಂಥಾ ಲಕ್ಷ್ಮಿಯಿಂದ ಕೂಡಿದವನು ನಾರಾಯಣ.

**ವಿಪಾಕ–ತಾಮ್ರ–ತುಂಡಿಕಾ–ಸುಪಾಟಲಾಧರ–ಶ್ರಿಯಾ ।**
**ವಲಕ್ಷ–ಕುಂದ–ಕುಡ್ಮಲ–ಪ್ರಕಾಶ–ಕಾಂತ–ದಂತಯಾ ॥ ೩೯ ॥**

ಸ್ವಲ್ಪ ಹಣ್ಣಾದ ತೊಂಡೆಕಾಯಿಯು ಹೇಗೆ ಕೆಂಪಾಗಿರುವುದೋ ಅದರಂತೇ ಕೆಂಪಾದ ತುಟಿಯ ಕಾಂತಿಯ, ಬೆಳ್ಳಗಿನ ಮಲ್ಲಿಗೆಯ ಮೊಗ್ಗಿನಂತಹ ಪ್ರಕಾಶದಿಂದ ಆಕರ್ಷಕವಾದ ಹಲ್ಲಿನವಳು ಆಕೆ. ಈ ಲಕ್ಷ್ಮಿಯಿಂದ ಜೊತೆಗೂಡಿದವನು ಹರಿಯು.

**ಗಳ–ಸ್ಫುರನ್ನಿರಂತರ–ಪ್ರಭಾಳಿ–ರತ್ನ–ವೇಷಯಾ ।**
**ಪ್ರವೇಕ–ವೇಷ–ಭೂಷಿತ–ಪ್ರವೇಷ್ಟ–ಶೋಭಿ–ಪದ್ಮಯಾ ॥ ೪೦ ॥**

ಕೊರಳಲ್ಲಿ ಹೊಳೆಯುವ ನಿರಂತರವೂ ಬೆಳಕಿನ ರಾಶಿಯ ರತ್ನದ ಹಾರಾಲಂಕಾರದ, ಉತ್ಕೃಷ್ಟವಾದ ಅಲಂಕಾರಗಳಿಂದ ಅಲಂಕೃತವಾದ ಕೈಗಳು, ಅಲ್ಲಿ ಶೋಭಿಸುವ ಪದ್ಮಗಳಿಂದಿರುವ ಲಕ್ಷ್ಮೀದೇವಿಯಿಂದ ಕೂಡಿದವನು ಪರಮಾತ್ಮಾ.

**ಸಹಾರ–ಮಾಲಿಕಾ–ತತೀ–ವಿರಾಜಿ–ಚಾರು–ವಕ್ಷಸಾ ।**
**ಸು–ವೃತ್ತ–ತುಂಗ–ಪೀವರ–ಜ್ವಲತ್–ಪಯೋಧರ–ಸ್ಫುರಾ ॥ ೪೧ ॥**

ಲಕ್ಷ್ಮೀದೇವಿಯು ಮುತ್ತಿನ ಸರ ಮತ್ತು ಹೂ ಮಾಲೆಗಳ ರಾಶಿಯಿಂದ ಹೊಳೆಯುತ್ತಿರುವ ಸುಂದರವಾದ ಎದೆಯವಳು. ದುಂಡಗಿನ ಎತ್ತರವಾದ ಹಿಗ್ಗಿದ ಕಾಂತಿಯುಕ್ತವಾದ ಕುಚಗಳಿಂದ ಚೆಲುವೆಯಾದವಳು. ಅವಳಿಂದ ಸಹವಾಸಿಯಾದವನು ಶ್ರೀಹರಿಯು.

**ತನೂದರ–ಸ್ಫುಟೀಭವದ್–ವಲಿ–ತ್ರಯಾಭಿರಾಮಯಾ ।**
**ಸುವರ್ಣ–ಮೇಖಲೋಪರಿ ಸ್ಫುರತ್–ಪಿಶಂಗ–ವಾಸಸಾ ॥ ೪೨ ॥**

ಹರಿಪ್ರಿಯೆಯ ಹೊಟ್ಟೆ ಕಿರಿದಾಗಿದೆ. ಅದ್ದರಿಂದ ಸ್ಪಷ್ಟವಾಗಿ ಗೋಚರಿಸುವ ಹೊಟ್ಟೆಯ ಮೇಲಿನ ಸುಂದರ ರೇಖೆಗಳಿಂದ ಚೆಲುವೆಯಾಗಿದ್ದಾಳೆ. ಚಿನ್ನದ ಸೊಂಟಪಟ್ಟಿಯ ಮೇಲೆ ಎದ್ದು ಕಾಣುವ ನಸುಗೆಂಪು ಬಣ್ಣದ ಬಟ್ಟೆಯನ್ನು ಧರಿಸಿದವಳು ಇಂತಹವಳಿಂದ ಹರಿಯು ಜೊತೆಯಾದನು.

**ಮನೋಜ್ಞ–ಹಾರಿ–ನೂಪುರ–ಪ್ರಭಾಸಿತಾಂಘ್ರಿ–ಪದ್ಮಯಾ ।**
**ಉದಾರ–ರತ್ನ–ದರ್ಪಣ–ಪ್ರಭಾ–ನಖಾವಲಿ–ಶ್ರಿಯಾ ॥ ೪೩ ॥**

ಮನೋಹರವಾದ ಕಾಲ್ಗೆಜ್ಜೆಯನ್ನು ಧರಿಸಿದ, ಆ ನೂಪುರದ ಪ್ರಭೆಯಿಂದ ಬೆಳಗಿದ ಪಾದವೆಂಬ ಕಮಲದ, ಉತ್ಕೃಷ್ಟವಾದ ರತ್ನದ ದರ್ಪಣದಂತೆ ಪ್ರಭೆಯಿಂದ ಕೂಡಿದ ಉಗುರುಗಳ ಸಮೂಹದ ಕಾಂತಿಯಿಂದ ಕೂಡಿದ ಲಕ್ಷ್ಮೀದೇವಿಯಿಂದ ಸಹಿತನಾದವನು ಈ ಶ್ರೀಹರಿ.

**ಅನಂತ–ನೂತ್ನ–ಭಾಸ್ಕರ–ಪ್ರಭಾ–ಪ್ರಭಾಸಮಾನಯಾ ।**
**ಗುಣಾಳಿ–ಭಾಜನೀಭವತ್–ಪ್ರಮೋದ–ಚಿತ್–ಸ್ವರೂಪಯಾ ॥ ೪೪ ॥**

ಶ್ರೀಹರಿಯೊಂದಿಗೆ ಸಹವರ್ತಿಯಾದ ಲಕ್ಷ್ಮೀದೇವಿಯು ಲೆಕ್ಕವಿಲ್ಲದಷ್ಟು ಉದಯದ ಸೂರ್ಯರ ಪ್ರಭೆಗೆ ಸಮಾನವಾಗಿ ಹೊಳೆಯುತ್ತಿರುವವಳು. ಲೆಕ್ಕವಿಡಲಾಗದಷ್ಟು ಗುಣಗಳಿಗೆ ಪಾತ್ರಳಾದವಳು. ಜ್ಞಾನ ಆನಂದಗಳೇ ಅವಳ ಶರೀರವಾಗಿದೆ.

**ತಥೈವ ಚಾರು–ಲೀಲಯಾ ಹರಿನ್ಮಣಿ–ಶ್ರಿಯಾ ಭುವಾ ।**
**ವಿಚಿತ್ರ–ವಾಸಸಾ ಸ್ಮಿತ–ಶ್ರಿಯಾಽನುರಂಜಿತಾಶಯಾ ॥ ೪೫ ॥**

ಹರಿಯು ಕೇವಲ ಲಕ್ಷ್ಮಿಯೊಂದಿಗೆ ಮಾತ್ರ ಇರುವವನಲ್ಲ. ಜೊತೆಗೆ ಆ ಲಕ್ಷ್ಮಿಯ ಮತ್ತೊಂದು ಭೂ ಎಂಬ ರೂಪವೂ ಇದೆ. ಸುಂದರ ಹಾವ–ಭಾವಗಳಿಂದ, ಪಚ್ಚೆಮಣಿಯ ಕಾಂತಿಯಿಂದ, ಬಹು ಬಣ್ಣದ ಬಟ್ಟೆಯಿಂದ, ಮುಗುಳು ನಗೆಯೆಂಬ ಸಂಪತ್ತಿನಿಂದ ಎಲ್ಲಾ ದಿಕ್ಕುಗಳನ್ನು ರಂಜಿಸಿದ ಭೂದೇವಿಯಿಂದಲೂ ಸಹಿತನಾಗಿರುವನು ನಾರಾಯಣ.

**ಅಥಾಪಿ ಸರ್ವ–ಸಾಕ್ಷಿಣೆ ಕ್ಷಣೇ–ಕ್ಷಣೇಂಬುಜೇಕ್ಷಣೇ ।**
**ಪ್ರವೃತ್ತಿ–ಜಾತಮಂಜಸಾ ಹರೌ ಮನಃ ಸಮರ್ಪಯ ॥ ೪೬ ॥**

ಇಲ್ಲಿಯವರೆಗೆ ಹರಿಯ ಧ್ಯಾನ ಮಾಡುವಾಗ ಅವನ ಅಕ್ಕ ಪಕ್ಕದಲ್ಲಿ ಲಕ್ಷ್ಮೀದೇವಿಯ ರೂಪಗಳೂ ಇವೆ, ಅವು ಎಂಥವು ಎಂದು ಹೇಳಿದ್ದಾಯ್ತು. ಮತ್ತೆ ಹರಿಯ ಎಂಥಾ ಸ್ವರೂಪವನ್ನು ನೆನೆಯಬೇಕು ಎನ್ನುವ ಸಂಗತಿಯನ್ನು ತಿಳಿಸುತ್ತಿದ್ದಾರೆ– ಪ್ರತಿಯೊಂದು ಕ್ಷಣವೂ ಎಲ್ಲವನ್ನೂ ಪ್ರತ್ಯಕ್ಷವಾಗಿಯೇ ಕಾಣಬಲ್ಲ ಕಮಲದಂಥಾ ಕಣ್ಣುಗಳು ಅವು. ಪ್ರತಿ ಕ್ಷಣದ ಎಲ್ಲಾ ಕ್ರಿಯೆಗಳನ್ನು ಇಂಥಾ ಹರಿಯಲ್ಲಿ ಅರ್ಪಿಸಬೇಕು.

**ಪುರೋಪಚೇಯಮಾತ್ಮನಃ ಪುರಾ ಪ್ರಸಾಧನಂ ಸ್ಮರ ।**
**ತತೋಪಚೇಯ ಸತ್–ಕ್ರಿಯಾ ಅಮುಷ್ಯ ಬುದ್ಧಿ–ವರ್ಧನೀಃ ॥ ೪೭ ॥**

ಓ ಮನಸೇ ಮೊದಲು ನೀನು ಸಂಪಾದಿಸಬೇಕಾದ ದೇವರನ್ನು ನೆನೆ, ಇಲ್ಲಿಯತನಕ ಏನು ಮಾಡಿದ್ದೀ ಅಂತ ಸ್ಮರಿಸು. ಮುಂದೆ ಮಾಡಬೇಕಾದ ಭಗವಂತನ ಪೂಜೆಯ ಕುರಿತಾಗಿ ಯೋಚಿಸು, ಇದುವೇ ನಿನಗೆ ಹರಿಯ ಜ್ಞಾನವನ್ನು ಬೆಳೆಸುತ್ತದೆ.

**ಉಪದ್ರವೇ ವಿಪತ್ತಿಭಿಃ ಸ್ಮರಾಘ–ನಾಶನಂ ಪರಾತ್ ।**
**ಅಶೇಷ–ಸಂಪದಾಂ ಪರಂ ಪದಂ ಮುದಾಽಭಿರಾಧಯ ॥ ೪೮ ॥**

ಬದುಕಿನಲ್ಲಿ ಗುಣದೋಷಗಳು ಯಾರಿಗಿಲ್ಲ..? ಬಂತೆಂದು ಬಂಡೆ ಬಂದು ತಲೆಗೆ ಬಿದ್ದಂತೆ ಮಾಡಬೇಕಾಗಿಲ್ಲ. ಸೋಲು–ವಿಪತ್ತುಗಳು ಬಂದಾಗ ಪಾಪನಾಶಕನಾದ ಹರಿಯ ನೆನೆಯಬೇಕು. (ಯಾವುದೇ ತೊದರೆಗಳು ಬರುವುದೂ ನಮ್ಮ ಪಾಪಗಳಿಂದಾಗಿಯೇ) ಅಷ್ಟೇ ಅಲ್ಲ ಆ ಹರಿಯ ರೂಪ ಅಥವಾ ಹರಿಯ ಚರಣಗಳು ಎಲ್ಲಾ ಸಂಪತ್ತುಗಳಿಗೂ ನೆಲೆಯಾಗಿದೆ. ಆದ್ದರಿಂದ ಆ ಶ್ರೀಹರಿಯನ್ನು ಸಂತೋಷದಿಂದ ಆರಾಧಿಸು. ಹರಿಯ ಆರಾಧನೆಯಿಂದ ಅನಿಷ್ಟಗಳು ದೂರವಾಗಿ ಇಷ್ಟಾರ್ಥಗಳ ಪ್ರಾಪ್ತಿಯಾಗುವುದು.

**ಸುಷುಪ್ತಿ–ಸಂಧ್ಯ–ಜಾಗರ–ಕ್ರಿಯಾ–ಫಲೈರ್ಹರಿಂ ಪುರಃ ।**
**ಪರಂ ಸದಾ ಸಮುದ್ದಿಶನ್ಮನೋಽರ್ಚಯಾಭಿನಂದಯ ॥ ೪೯ ॥**

ಎಚ್ಚರ – ಕನಸು – ನಿದ್ದೆಗಳೆಂಬ ಬದುಕಿನ ಮೂರು ಅವಸ್ಥೆಗಳು. ಇವುಗಳಿಂದ ಮತ್ತು ಇವುಗಳ ಫಲಗಳಿಂದ, ಎಂದರೆ ಎಚ್ಚರದಲ್ಲಿ ನಡೆಸುವ ನಡೆದಾಡುವುದು ಊಟ ಮಾತು ಮೊದಲಾದ ವ್ಯವಹಾರ, ಕನಸಿನಲ್ಲಿ ವಿವಿಧ ವಿಷಯಗಳನ್ನು ಅನುಭವಿಸುವುದು, ನಿದ್ದೆಯಲ್ಲಿ ಎಲ್ಲವನ್ನೂ ಬಿಟ್ಟು ಗಾಢವಾಗಿ ಸುಖಿಸುವುದು. ಈ ಎಲ್ಲದರಿಂದಲೂ ಹರಿಗೆ ಪ್ರೀತಿಯಾಗಲಿ ಎಂದು ಅವನ ಆರಾಧನೆಯೆಂದು ಭಾವಿಸು ಓ ಮನವೇ.

**॥ ಇತಿ ಶ್ರೀನಾರಾಯಣಪಂಡಿತಾಚಾರ್ಯವಿರಧ್ಯಾನಮಾಲಾ ಸಮಾಪ್ತಾ ॥**